# GOVERNMENT OF KARNATAKA
# KARNATAKA STATE PRE-UNIVERSITY EDUCATION EXAMINATION BOARD
## II YEAR PUC EXAMINATION MARCH-2017
## SCHEME OF VALUATION

SUBJECT CODE: 23 | SUBJECT: LOGIC

## I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ 10*1=10

| | | |
|---|---|---|
| 1. | ವಿಚಾರವು ಕೆಲವುದರಿಂಧ ಎಲ್ಲದರ ಕಡೆಗೆ, ಅವಲೋಕಿಸಲ್ಪಟ್ಟ ಅಂಶಗಳಿಂದ ಅವಲೋಕಿಸಲ್ಪಡದ ಅಂಶಗಳ ಕಡೆಗೆ ಸಾಗುವ ಪ್ರಕ್ರಿಯೆ. | 1 |
| 2 | ವಿಗಮನಗಳೆಂದು ಸತ್ಯವಾಗಿ / ನಿಜವಾಗಿ ಭಾವಿತವಾದವುಗಳು. | 1 |
| 3 | ಪ್ರಶ್ನಿಸದೇ ಒಪ್ಪಿಕೊಂಡ ತತ್ವ / ಸ್ವತ: ಸಿದ್ಧ ತತ್ವ. | 1 |
| 4 | ವಿವಿಧ ಸನ್ನಿವೇಶಗಳಲ್ಲಿ ವಿವಿಧ ಕಾರಣಗಳು ಒಂದೇ ರೀತಿಯ ಪರಿಣಾಮವನ್ನು ಉಂಟುಮಾಡುವುದು. | 1 |
| 5 | ಎರಡು ನಿದರ್ಶನಗಳ ಅಗತ್ಯ ಇದೆ. | 1 |
| 6 | ಪರೀಕ್ಷಣೆಗೆ ಒಳಪಡಿಸಲಾಗದ ಉಪಕಲ್ಪನೆ | 1 |
| 7 | ಘಟನೆಯು ಘಟಿಸುವ ಸಾಧ್ಯತೆ ಅಧಿಕವಾಗಿರುತ್ತದೆ. | 1 |
| 8 | ಅಸ್ಪಷ್ಟತೆ, ಜಟಿಲತೆಯಿಂದ ಕೂಡಿದ ಸ್ಥಿತಿಯನ್ನು ತಿಳಿಗೊಳಿಸಿ ಎಲ್ಲವನ್ನು ಸ್ಪಷ್ಟಗೊಳಿಸುವುದು. | 1 |
| 9 | ತರ್ಕಬದ್ಧವಾದ ನಿಯಮಗಳನ್ನು ಉಲ್ಲಂಘಿಸಿದಾಗ ತರ್ಕದೋಷ ಉಂಟಾಗುತ್ತದೆ. | 1 |
| 10 | ಇಂದ್ರಿಯಾನುಭವದಿಂದ ಪಡೆದ ತಪ್ಪಾದ ಜ್ಞಾನ. | 1 |

## II ಕೆಳಗಿನ ಯಾವುದಾದರೂ 10 ಪ್ರಶ್ನೆಗಳಿಗೆ ಉತ್ತರಿಸಿ 10*2=20

| | | |
|---|---|---|
| 11 | 1. ಸರಳ ಎಣಿಕೆಯ ವಿಗಮನ 2. ಸಾದೃಶ್ಯಾನುಮಾನ 3. ವೈಜ್ಞಾನಿಕ ವಿಗಮನ | 1+1 |
| 12 | 1. ನಿಸರ್ಗದ ಏಕತಾ ನಿಯಮ 2. ಕಾರ್ಯ – ಕಾರಣ ನಿಯಮ | 1+1 |

| | | |
|---|---|---|
| 13 | ಅವಲೋಕಿಸಲೇಬೇಕಾದ ಸಂಗತಿಗಳನ್ನು ಉಪೇಕ್ಷಿಸಿದಾಗ / ಕೇವಲ ಭಾವಾತ್ಮಕ ಸಂಗತಿಗಳನ್ನು ಮಾತ್ರ ಅವಲೋಕಿಸಿ ನಿಷೇಧಾತ್ಮಕ ಸಂಗತಿಗಳನ್ನು ನಿರ್ಲಕ್ಷಿಸಿದಾಗ ಉಂಟಾಗುತ್ತದೆ. | 2 |
| 14 | 1. ಅನುಕ್ರಮ ಏಕಪ್ರಕಾರತೆ<br>2. ಸಾಹಚರ್ಯ ಏಕಪ್ರಕಾರತೆ<br>3. ಸಮಾನ ಮತ್ತು ಅಸಮಾನ ಏಕಪ್ರಕಾರತೆ | 1+1 |
| 15 | 1. ಭೌತಿಕ ಕಾರಣ<br>2. ರೂಪಾತ್ಮಕ ಕಾರಣ | 1 |
| | 3. ಶಕ್ತ / ನಿಮಿತ್ತ ಕಾರಣ<br>4. ಅಂತಿಮ ಕಾರಣ | 1 |
| 16 | 1. ಪರಿಣಾಮಗಳ ಸಮರೂಪದ ಅಂತರ್ ಸಮ್ಮಿಶ್ರಣ / ಸಜಾತೀಯ<br>2. ಪರಿಣಾಮಗಳ ವಿಭಿನ್ನರೂಪದ ಅಂತರ್ ಸಮ್ಮಿಶ್ರಣ / ಸಜಾತೀಯ | 1<br>1 |
| 17 | 1. ಹೊಂದಾಣಿಕೆ ವಿಧಾನ<br>2. ವ್ಯತಿರೇಕ ವಿಧಾನ<br><br>ಐದು ವಿಧಾನಗಳಲ್ಲಿ ಯಾವುದಾದರೂ ಎರಡು ವಿಧಾನಗಳು | 1<br>1 |
| 18 | ಒಂದು ಘಟನೆಯನ್ನು ವಿವರಿಸಲು ಒಂದಕ್ಕಿಂತ ಹೆಚ್ಚು ಉಪಕಲ್ಪನೆಗಳಿರುವುದನ್ನು ದ್ವಂದ್ವ ಉಪಕಲ್ಪನೆ ಎನ್ನುವರು. | 2 |
| 19 | ಘಟನೆಯನ್ನು ತಾತ್ಕಾಲಿಕವಾಗಿ ವಿವರಿಸುವ ಮತ್ತು ಮುಂದಿನ ವೈಜ್ಞಾನಿಕ ಅನ್ವೇಷಣೆಗೆ ಮಾರ್ಗದರ್ಶಿಯಾಗುವ ಉಪಕಲ್ಪನೆ | 2 |
| 20 | 1. ವ್ಯಕ್ತಿ ನಿಷ್ಠ<br>2. ವಸ್ತು ನಿಷ್ಠ | 1<br>1 |
| 21 | 1. ವಿಶ್ಲೇಷಣೆ<br>2. ಸಂಯೋಜನೆ<br>3. ಸಮೀಕರಣೆ | 1+1 |
| 22 | ಕಾರ್ಯ ಉಂಟಾಗುವುದಕ್ಕೆ ಮೊದಲು ಕಾರ್ಯವು ಕಾರಣದಲ್ಲಿ ಅವ್ಯಕ್ತ ರೂಪದಲ್ಲಿ ಇರುತ್ತದೆ. | 2 |
| **III (A)** | **ಕೆಳಗಿನ ಯಾವುದಾದರೂ 04ಕ್ಕೆ ಉತ್ತರಿಸಿ** | **4*5=20** |

| | | |
|---|---|---|
| 23 | ವೈಜ್ಞಾನಿಕ ವಿಗಮನ :<br>ಒಂದು ಗುಂಪಿನಲ್ಲಿ ಬರುವ ಕೆಲವು ಪ್ರತ್ಯೇಕ ಸಂಗತಿಗಳನ್ನು ಅವಲೋಕಿಸಿ ಅವುಗಳಲ್ಲೂ ಹೋಲಿಕೆ ಇರುವುದನ್ನು ಗಮನಿಸಿ ವಿಗಮನದ ಗೃಹೀತ ತತ್ವಗಳಾದ ನಿಸರ್ಗದ ಏಕತಾ ನಿಯಮ ಮತ್ತು ಕಾರ್ಯಕಾರಣ ನಿಯಮಗಳ ಆಧಾರದ ಮೇಲೆ ವಿಗಮನ ನೆಗೆತವನ್ನು ಮಾಡಿ ಎಲ್ಲಾ ಅಂಶಗಳಿಗೂ ಅನ್ವಯಿಸುವ ವಾಸ್ತವಿಕವಾದ ಸಾಮಾನ್ಯ ನಿಯಮವನ್ನು ರಚಿಸುತ್ತದೆ.<br>ಲಕ್ಷಣಗಳು :<br>1. ಪ್ರತ್ಯೇಕ ಸಂಗತಿಗಳ ಅವಲೋಕನವಿದೆ.<br>2. ವಾಸ್ತವಿಕವಾದ ಸಾಮಾನ್ಯ ವಾಕ್ಯವನ್ನು ರಚಿಸುತ್ತದೆ.<br>3. ವಿಗಮನ ನೆಗೆತ ಇದೆ.<br>4. ಗೃಹೀತ ತತ್ವಗಳ ಮೇಲೆ ಆಧಾರಿತವಾಗಿದೆ.<br>5. ಕಾರ್ಯಕಾರಣ ಸಂಬಂಧವನ್ನು ಸಮರ್ಥಿಸುತ್ತದೆ. | 2<br><br><br><br><br><br><br><br>3 |
| 24 | ಕಾರಣ ತತ್ವದ ಲಕ್ಷಣಗಳು :<br>1. ಕಾರಣವು ಪರಿಣಾಮಕ್ಕೆ ಸಾಪೇಕ್ಷವಾದುದು.<br>2. ಕಾರಣವು ಪರಿಣಾಮದ ಪೂರ್ವಾಂಗ ಘಟನೆಯಾಗಿರುತ್ತದೆ.<br>3. ಕಾರಣವು ಪರಿಣಾಮದ ಅಪರಿವರ್ತನೀಯ ಪೂರ್ವಾಂಗವಾಗಿರುತ್ತದೆ.<br>4. ಕಾರಣವು ಪರಿಣಾಮದ ನಿರುಪಾಧಿಕ ಪೂರ್ವಾಂಗವಾಗಿದೆ.<br>5. ಕಾರ್ಯ-ಕಾರಣ ಸಂಬಂಧವು ಪರಸ್ಪರ ಅನ್ಯೋನ್ಯವಾಗಿದೆ.<br>6. ಕಾರಣವು ತಕ್ಷಣದ ಪೂರ್ವಾಂಗವಾಗಿದೆ.<br>7. ಕಾರಣ ಮತ್ತು ಪರಿಣಾಮಗಳು ಪರಿಮಾಣಾತ್ಮಕವಾಗಿ ಸಮನಾಗಿರುತ್ತದೆ. | 1<br>1<br>1<br>1<br>1 |
| 25 | ಅವಲೋಕನದ ಸ್ಥಿತಿಗಳು :<br>1. <u>ಭೌತಿಕ ಸ್ಥಿತಿ :</u> ಅವಲೋಕಿಸುವವನ ಪಂಚೇಂದ್ರಿಯಗಳು ಅತ್ಯಂತ ಸೂಕ್ಷ್ಮ ಸಂವೇದಿಗಳಾಗಿರಬೇಕು. ಯಾವುದೇ ಕಾಯಿಲೆಯಿಂದ ಬಳಲುತ್ತಿರಬಾರದು. ನಿಸರ್ಗವು ಕೂಡಾ ಅವಲೋಕಿಕನಿಗೆ ಸಹಕರಿಸಬೇಕು.<br>2. <u>ಬೌದ್ಧಿಕ ಸ್ಥಿತಿ</u> : ಅವಲೋಕಿಕನು ಅವಲೋಕಿಸುವ ಸಮಸ್ಯೆಗೆ ಸಂಬಂಧಪಟ್ಟ ಘಟನೆಗಳನ್ನು ತಿಳಿಯುವ ಸಾಮರ್ಥ್ಯವುಳ್ಳವನಾಗಿರಬೇಕು. ಅತಿಯಾದ ಆಸಕ್ತಿ ಮತ್ತು ಜ್ಞಾನದಾಹಗಳಿರಬೇಕು. ಅವಲೋಕನದಲ್ಲಿ ಉಪಕರಣಗಳ ಬಳಕೆ ಅಗತ್ಯವಿದ್ದಾಗ ಅಂತಹ ಉಪಕರಣಗಳನ್ನು ಬಳಸುವ ಕಲೆ ಮತ್ತು ಕೌಶಲ್ಯವಿರಬೇಕು.<br>3. <u>ನೈತಿಕ ಸ್ಥಿತಿ :</u> ಅವಲೋಕನಕ್ಕೆ ನಿಷ್ಪಕ್ಷಪಾತವಾಗಿರುವ ಮನಸ್ಸು ಇರಬೇಕಾದದ್ದು ಅತ್ಯಂತ ಅಗತ್ಯ. ತನ್ನ ವೈಯಕ್ತಿಕ ಹಿತಾಸಕ್ತಿಗಳು ಅವಲೋಕನದ ಮೇಲೆ ಪ್ರಭಾವ ಬೀರದಂತೆ ಗಮನಿಸಬೇಕು. ಅವಲೋಕಿಸುವವನ ನೈತಿಕ ಗುರಿ ಸತ್ಯದ ಅನ್ವೇಷಣೆ ಆಗಿರಬೇಕು. | 2<br><br>2<br><br>1 |
| 26 | ಸಹಪರಿವರ್ತನಾ / ಸಂಗಾಮಿ ವ್ಯತ್ಯಯ ವಿಧಾನ :<br>ಸೂತ್ರ – "ಒಂದು ಘಟನೆಯು ಒಂದು ನಿರ್ದಿಷ್ಟ ರೀತಿಯಲ್ಲಿ ಬದಲಾವಣೆಯಾದಾಗ ಯಾವುದೊಂದು ಘಟನೆಯು ಯಾವುದೇ ರೀತಿಯಲ್ಲಿ ಬದಲಾವಣೆಗೊಂಡರೆ ಆ ಬದಲಾವಣೆಯಾಗುವ ಸನ್ನಿವೇಶವೇ ಆ ಘಟನೆಗೆ ಕಾರಣವಾಗಿರುತ್ತದೆ".<br>ವರ್ಜ್ಯ ಸೂತ್ರ- " ಎರಡು ಘಟನೆಗಳು ಒಟ್ಟಾಗಿ ಪರಿವರ್ತನೆಗೊಳ್ಳುವುದಾದರೆ ಅವುಗಳ ನಡುವೆ ಕಾರ್ಯಕಾರಣ ಸಂಬಂಧವಿರುತ್ತದೆ. ಒಂದು ಪೂರ್ವಾಂಗ ಮತ್ತು ಒಂದು ಉತ್ತರಾಂಗವು ಸಾಂಖ್ಯಿಕ ಪರಿವರ್ತನೆಯಲ್ಲಿ ಒಟ್ಟಾಗಿ ವ್ಯತ್ಯಾಸಗಳನ್ನು ಕಾಣುತ್ತಿದ್ದರೆ | 2 |

| | | |
|---|---|---|
| | ಅವುಗಳನ್ನು ಕಾರಣ ಮತ್ತು ಕಾರ್ಯಗಳೆಂದು ಭಾವಿಸಬೇಕಾಗುತ್ತದೆ.<br>ಒಂದು ಸಾಂಕೇತಿಕ ಮತ್ತು ಒಂದು ವಾಸ್ತವಿಕ ಉದಾಹರಣೆಯೊಂದಿಗೆ ವಿವರಿಸಬೇಕು. | 3 |
| 27 | ಸಮಂಜಸ ಉಪಕಲ್ಪನೆ / ಆಧಾರ ಕಲ್ಪನೆಯ ಲಕ್ಷಣಗಳು :<br>1. ಆಧಾರ ಕಲ್ಪನೆಯು ಸುಸಂಬದ್ಧವಾಗಿರಬೇಕು / ಸಂಭಾವ್ಯವಾಗಿರಬೇಕು.<br>2. ಆಧಾರ ಕಲ್ಪನೆ ಆತ್ಮ ವಿರುದ್ಧವಾಗಿರಬಾರದು / ಪ್ರಕೃತವಾಗಿರಬೇಕು.<br>3. ಆಧಾರ ಕಲ್ಪನೆ ಈಗಾಗಲೇ ಸ್ಥಿರೀಕರಿಸಲಾದ ನಿಯಮಗಳಿಗೆ ವಿರುದ್ಧವಾಗಿರಬಾರದು.<br>4. ಆಧಾರ ಕಲ್ಪನೆ ಘಟನೆಗಳನ್ನು ಆಧರಿಸಿದೆ.<br>5. ಆಧಾರ ಕಲ್ಪನೆ ಯಥೋಚಿತವಾಗಿರಬೇಕು.<br><br>ಇವುಗಳನ್ನು ವಿವರಿಸಬೇಕು. | 2<br><br>3 |
| 28 | ವೈಜ್ಞಾನಿಕ ವಿವರಣೆಯ ಮಿತಿಗಳು :<br>1. ಪ್ರಜ್ಞೆಯ ಮೂಲಭೂತ ಸ್ಥಿತಿಗಳನ್ನು ವಿವರಿಸಲು ಸಾಧ್ಯವಿಲ್ಲ.<br>2. ಭೌತಿಕ ವಸ್ತುವಿನ ಪ್ರಾಥಮಿಕ ಗುಣ ವಿಶೇಷವನ್ನು ವಿವರಿಸಲು ಸಾಧ್ಯವಿಲ್ಲ.<br>3. ಮೂಲಭೂತ ಅಥವಾ ಮೂಲ ತತ್ವಗಳನ್ನು ಸಮರ್ಪಕವಾಗಿ ವಿವರಿಸಲು ಸಾಧ್ಯವಿಲ್ಲ ಈ ನಿಯಮಗಳು ಗರಿಷ್ಠ ಮಟ್ಟದ ಸಾಮಾನ್ಯತೆಯನ್ನು ಒಳಗೊಂಡಿರುತ್ತವೆ.<br><br>ಇವುಗಳನ್ನು ವಿವರಿಸಬೇಕು. | 2<br><br>3 |
| **B) ಕೆಳಗಿನ ಯಾವುದಾದರೂ ನಾಲ್ಕು ವಾದಗಳ ಸಮಂಜಸತೆಯನ್ನು ಪರಿಶೀಲಿಸಿ ಮತ್ತು ವಿವರಿಸಿ** | | **4*5=20** |
| 29 | ವ್ಯಕ್ತಿ ದೂಷಣವಾದ ದೋಷ<br>Fallacy of Argumentum – Ad – Hominum<br><br>ವಿವರಣೆ | 2<br><br>3 |
| 30 | ಅಸಮಂಜಸ ಸಾದೃಶ್ಯಾನುಮಾನ ದೋಷ<br>Fallacy of unsound Analogy<br><br>ವಿವರಣೆ | 2<br><br>3 |
| 31 | ಬಹು ಪ್ರಶ್ನೆಯ / ಸಂಕೀರ್ಣ ಪ್ರಶ್ನೆಯ ದೋಷ<br>Fallacy of many question.<br>ವಿವರಣೆ | 2<br><br>3 |
| 32 | ವಿವಕ್ಷಿತ ನಿರ್ಣಯ ದೋಷ / ಚಕ್ರಕ ದೋಷ<br>Fallacy of Petitio principii<br><br>ವಿವರಣೆ | 2<br><br>3 |

| | | |
|---|---|---|
| 33 | ಆಪ್ತವಾಕ್ಯವಾದ ದೋಷ<br>Fallacy of Argumentum – Ad – Verecundium<br><br>ವಿವರಣೆ | 2<br><br><br>3 |
| 34 | ಕಾಕತಾಳೀಯ ನ್ಯಾಯ ದೋಷ<br>Fallacy of post-hoc-ergo-propter-hoc<br><br>ವಿವರಣೆ | 2<br><br><br>3 |
| **IV** | **ಕೆಳಗಿನ ಯಾವುದಾದರೂ 02 ಪ್ರಶ್ನೆಗಳಿಗೆ ಉತ್ತರಿಸಿ** | **2*5=10** |
| 35 | ನಿಗಮನ ಮತ್ತು ವಿಗಮನಗಳ ನಡುವಿನ ವ್ಯತ್ಯಾಸಗಳು :<br>1. ನಿಗಮನ ಮತ್ತು ವಿಗಮನಗಳು ಪ್ರಾರಂಭದಲ್ಲಿ ವ್ಯತ್ಯಾಸ ಹೊಂದಿವೆ.<br>ನಿಗಮನ – ಸಾಮಾನ್ಯದಿಂದ ಪ್ರತ್ಯೇಕ ಸಂಗತಿಯ ಸತ್ಯವನ್ನು ಊಹಿಸುತ್ತದೆ.<br>ಉದಾ : ಎಲ್ಲಾ ಮಾನವರು ಮರ್ತ್ಯರು<br>ಪ್ಲೇಟೋ ಒಬ್ಬ ಮಾನವ<br>∴ ಪ್ಲೇಟೋ ಮರ್ತ್ಯ.<br>ವಿಗಮನ – ಪ್ರತ್ಯೇಕದಿಂದ ಸಾಮಾನ್ಯವನ್ನು ಊಹಿಸುತ್ತದೆ.<br>ಉದಾ : A ಮರ್ತ್ಯ, B ಮರ್ತ್ಯ, C ಮರ್ತ್ಯ ಇತ್ಯಾದಿ<br>∴ ಎಲ್ಲಾ ಮಾನವರು ಮರ್ತ್ಯರು.<br>2. ಗುರಿಯಲ್ಲಿ ವ್ಯತ್ಯಾಸ ಹೊಂದಿವೆ<br>ನಿಗಮನ – ರೂಪಾತ್ಮಕ ಸತ್ಯ<br>ಉದಾ : ಎಲ್ಲಾ ಮಾನವರು ಅಮರ್ತ್ಯರು<br>ವಿಗಮನ – ವಾಸ್ತವಿಕ / ವಿಷಯಾತ್ಮಕ ಸತ್ಯ<br>ಉದಾ : 1. ಎಲ್ಲಾ ಮಾನವರು ಮರ್ತ್ಯರು<br>ಎಲ್ಲಾ ಲೋಹಗಳು ಕಾಯಿಸಿದಾಗ ಕರಗುತ್ತವೆ.<br>3. ನಿರ್ಣಯದ ವ್ಯಾಪ್ತಿಯಲ್ಲಿ ವ್ಯತ್ಯಾಸವನ್ನು ಹೊಂದಿವೆ<br>ನಿಗಮನ – ಕಡಿಮೆ ವಿಸ್ತಾರವಾಗಿರುತ್ತದೆ.<br>ವಿಗಮನ – ಹೆಚ್ಚು ವಿಸ್ತಾರವಾಗಿರುತ್ತದೆ.<br>ಇವುಗಳನ್ನು ವಿವರಿಸಬೇಕು. | 2<br><br><br><br><br><br><br><br><br><br><br><br><br>2<br><br><br><br>1 |
| 36 | ಮಾನವನಿಗೆ ಬಾಹ್ಯ ಪ್ರಪಂಚದ ಬಗ್ಗೆ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವು ಸಂವೇದನೆಗಳನ್ನು ಒದಗಿಸುತ್ತವೆ. ಇವುಗಳ ಸಹಜ ಶಕ್ತಿ ತುಂಬಾ ಸೀಮಿತವಾಗಿರುತ್ತವೆ. ಅತೀ ದೂರದಲ್ಲಿರುವ ಗ್ರಹ-ನಕ್ಷತ್ರಗಳು ನಮ್ಮ ಬರೀ ಕಣ್ಣಿಗೆ ಕಾಣಿಸುವುದೇ ಇಲ್ಲ. ಹಾಗೆಯೇ ನಮ್ಮ ಸುತ್ತಮುತ್ತಲೂ ಇರುವ ಅನೇಕ ಶಬ್ಧ ತರಂಗಗಳು ಕೇಳಿಸುವುದಿಲ್ಲ. ಅಂದರೆ ನಮ್ಮ ಜ್ಞಾನೇಂದ್ರಿಯಗಳ ಶಕ್ತಿಯು ತುಂಬಾ ಸೀಮಿತವಾಗಿರುವುದರಿಂದ ಈ ಶಕ್ತಿಯನ್ನು ಹೆಚ್ಚಿಸಲು ಮಾನವನು ಅನೇಕ ಉಪಕರಣಗಳನ್ನು ಬಳಸುತ್ತಾನೆ.<br>ಸೂಕ್ಷ್ಮದರ್ಶಕ ಯಂತ್ರ, ದೂರದರ್ಶನ ಯಂತ್ರ, ಥರ್ಮೋಮೀಟರ್, ತಕ್ಕಡಿ ಇತ್ಯಾದಿ | 2 |

| | | |
|---|---|---|
| | ಇವುಗಳನ್ನು ವಿವರಿಸಬೇಕು. | 3 |
| 37 | ವೈಜ್ಞಾನಿಕ / ಶಾಸ್ತ್ರೀಯ ವಿಧಾನದ ಲಕ್ಷಣಗಳು :<br>1. ವ್ಯಾಖ್ಯಾಯನ<br>2. ದತ್ತಾಂಶಗಳ [ಅಧ್ಯಯನ ವಿಷಯ ವಸ್ತುಗಳ ] ಸಂಗ್ರಹ<br>3. ಆಧಾರ ಕಲ್ಪನೆ / ಉಪಕಲ್ಪನೆ<br>4. ಸಾಮಾನ್ಯೀಕರಣ<br>5. ಪರೀಕ್ಷಣೆ ಮತ್ತು ಸಮರ್ಥನೆ<br><br>ಇವುಗಳನ್ನು ವಿವರಿಸಬೇಕು | 2<br><br><br><br><br><br>3 |
| **B)** | **ಕೆಳಗಿನ ಯಾವುದಾದರೂ 01 ಪ್ರಶ್ನೆಗೆ ಉತ್ತರಿಸಿ** | **1*10=10** |
| 38 | ಆಯಥಾರ್ಥ ವಿಗಮನದ ವಿಧಗಳು :<br>1. ಸಮಗ್ರ ಗಣನೆಯ ವಿಗಮನ / ಪರಿಪೂರ್ಣ ವಿಗಮನ<br>ಒಂದು ಗುಂಪಿನಲ್ಲಿ ಬರುವ ಎಲ್ಲಾ ಪ್ರತ್ಯೇಕ ಸಂಗತಿಗಳನ್ನು ಎಣಿಸಿ ಅಥವಾ ಅವಲೋಕಿಸಿ ಇಡೀ ಗುಂಪಿಗೂ ಅನ್ವಯಿಸುವ ಸಾಮಾನ್ಯ ವಾಕ್ಯವನ್ನು ರಚಿಸುತ್ತದೆ.<br>ಉದಾ : 1. ವರ್ಷದ ಪ್ರತಿಯೊಂದು ತಿಂಗಳು 32 ದಿವಸಗಳಿಗಿಂತ ಕಡಿಮೆ ದಿವಸಗಳನ್ನು ಹೊಂದಿರುತ್ತದೆ.<br>2. ಎಲ್ಲಾ ಖಂಡಗಳಲ್ಲಿಯೂ ಒಂದು ಮಹಾ ನದಿ ಇದೆ.<br>2. ತರ್ಕಸಾಮ್ಯ / ಊಹನಾ ಸಾಮ್ಯ ವಿಗಮನ<br>ಒಂದು ಪ್ರತ್ಯೇಕ ಸಂಗತಿಯ ಸತ್ಯವನ್ನು ಸ್ಥಾಪಿಸುವ ತರ್ಕವೇ ಇತರೆ ಪ್ರತಿಯೊಂದು ಸದೃಶ ಸಂಗತಿಯ ನಿಯಮ ಸ್ಥಾಪನೆಗೆ ಸಾಕಾಗುತ್ತದೆ.<br>ಉದಾ : "ಎಲ್ಲಾ ತ್ರಿಕೋನಗಳಲ್ಲಿ ಮೂರು ಕೋನಗಳ ಮೊತ್ತ $180^{\circ}$" ಇರುತ್ತದೆ.<br>3. ಘಟನಾ ಸಂಯೋಗ / ಘಟನೆಗಳ ಸಮ್ಮಿಳನ ವಿಧಾನ<br>ಅವಲೋಕಿಸಿದ ಹಲವು ಘಟನೆಗಳನ್ನು ಸೂಕ್ತವಾದ ಭಾವನೆಯ ಮೂಲಕ ಮಾನಸಿಕವಾಗಿ ಒಟ್ಟುಗೂಡಿಸುವುದು.<br>ಉದಾ : ಆರು ಜನ ಕುರುಡರು ಆನೆಯ ಚಿತ್ರಣವನ್ನು ವಿವರಿಸಿದ ಕಥೆ.<br>ಮೂರು ವಿಧಾನಗಳನ್ನು ವಿವರಿಸಬೇಕು. | 4<br><br><br><br><br><br><br>3<br><br><br><br><br>3 |

| | | |
|---|---|---|
| | | |
| 39 | ಹೊಂದಾಣಿಕೆ / ಅನ್ವಯ ವಿಧಾನ<br>ಸೂತ್ರ – "ತನಿಖೆಯಲ್ಲಿರುವ ಘಟನೆಗಳಲ್ಲಿ ಎರಡು ಅಥವಾ ಹೆಚ್ಚಿನ ನಿದರ್ಶನಗಳಿದ್ದು, ಒಂದು ಸನ್ನಿವೇಶವು ಮಾತ್ರ ಸಾಮಾನ್ಯವಾಗಿರುತ್ತದೆ. ಉಳಿದ ಸನ್ನಿವೇಶಗಳು ವ್ಯತ್ಯಾಸವಾಗಿರುತ್ತವೆ. ಆ ಸಾಮಾನ್ಯವಾಗಿರುವ ಸನ್ನಿವೇಶವೇ ಘಟನೆಗೆ ಕಾರಣವಾಗಿರುತ್ತದೆ"<br>ವರ್ಜ್ಯ ಸೂತ್ರ – " ಯಾವುದರ ಅನುಪಸ್ಥಿತಿಯಲ್ಲಿ ಘಟನೆಯು ಸಂಭವಿಸುತ್ತದೆಯೋ ಅದು ಘಟನೆಯ ಕಾರಣವಲ್ಲ".<br>ಸಾಂಕೇತಿಕ ಉದಾ :<br>ಪೂರ್ವಾಂಗ ಉತ್ತರಾಂಗ<br>ABC PQR<br>ADE PST<br>AFG PUV<br>∴ A ಯು P ಯ ಕಾರಣವಾಗಿದೆ.<br>ವಾಸ್ತವಿಕ ಉದಾಹರಣೆಯೊಂದಿಗೆ ವಿವರಿಸಬೇಕು.<br>ಗುಣಗಳು ಮತ್ತು ದೋಷಗಳನ್ನು ಬರೆಯಬೇಕು. | 2<br>1<br>4<br>3 |
| **V** | **ಕೆಳಗಿನ ಯಾವುದಾದರೂ 02 ಪ್ರಶ್ನೆಗಳಿಗೆ ಉತ್ತರಿಸಿ** | **2*5=10** |
| 40 | "ಮಹಿಳಾ ವಿದ್ಯಾಭ್ಯಾಸವು ಸಮಾಜದ ಬೆಳವಣಿಗೆಗೆ ಪೂರಕವಾಗಿದೆ". ಎನ್ನುವುದನ್ನು ವಿದ್ಯಾರ್ಥಿಯು ಚರ್ಚಿಸಿರುವುದನ್ನು ಗಮನಿಸಿ, ವಿದ್ಯಾರ್ಥಿಯ ಜಾಣ್ಮೆಯನ್ನು ಗಮನಿಸಿ ಅಂಕಗಳನ್ನು ನೀಡುವುದು.<br>ಪೀಠಿಕೆ<br>ವಿವರಣೆ | 2<br>3 |
| 41 | ದ್ವಿಚಕ್ರ ವಾಹನ ಚಾಲಕರು ಶಿರಸ್ತ್ರಾಣ (Helmet) ಧರಿಸುವುದು ಅವಶ್ಯಕವೆಂದು ವಿದ್ಯಾರ್ಥಿಯು ತನ್ನ ಅಭಿಪ್ರಾಯವನ್ನು ತಿಳಿಸಿರುವುದನ್ನು ಗಮನಿಸಿ, ವಿದ್ಯಾರ್ಥಿಯ ಬುದ್ಧಿವಂತಿಕೆಯನ್ನು ಪರಿಗಣಿಸಿ ಅಂಕಗಳನ್ನು ನೀಡುವುದು.<br>ಪೀಠಿಕೆ<br>ವಿವರಣೆ | 2<br>3 |
| 42 | ವಿದ್ಯಾರ್ಥಿಗಳು ಜಂಗಮವಾಣಿ (Mobile phone) ಯನ್ನು ಬಳಸುವುದರಿಂದ ವಿದ್ಯಾರ್ಥಿಗಳ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಯು ತಿಳಿಸಿರುವ ಅಂಶಗಳನ್ನು ಪರಿಗಣಿಸಿ, ಆತನ ಜಾಣ್ಮೆಯನ್ನು ಗಮನಿಸಿ ಅಂಕಗಳನ್ನು ನೀಡುವುದು.<br>ಪೀಠಿಕೆ<br>ವಿವರಣೆ | 2<br>3 |